D04-2
1-2-2

R No KERNN 12 ಶ್ರೀ 3-1-1975

ಸ್ವರ್ಣ ಮಹೋತ್ಸವ ನೆರವೇರಿದ ರತ್ನ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು: ಆಡಿಮನೆ ಶಂಸ್ಕೃದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ಥಾರವಿರಂತ ಎಂ. ಎಸ್. ಶ್ರೀಕೃಷ್ಣಾನ್ (3 ಕೈಸೆ

ಕಾಪೊರೇಷನ್ ಚುನಾವಣೆ ಕೂಡಲೇ ನಡೆಯಲಿ

ಮಹಾತ್ಮಾ ಗಾಂಧಿ ಸೇವಾ ಸಂಘದ ಕಾರ್ಯದರ್ಶಿ ಡಾ॥ ಬಿ. ಜಿ. ಡಾಸ್ ಮತ್ತು ಉಪಾಧ್ಯಕ್ಷ ಶ್ರೀ ಡಿ. ಜತ್ತಿ

ಡಾ॥ ಕರಣ್ ಸಿಂಗ್

ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಯೋಜನೆ ಮಂತ್ರಿ ಡಾ॥ ಕರಣ್ ಸಿಂಗ್‌ರು 4 ನೇ ತಾ॥ ರಾತ್ರಿ ಬೆಂಗಳೂರಿನಿಂದ ಮೈಸೂರಿಗೆ ತೆರಳುವ ಮುನ್ನ ಬೆ. ಗಳೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಅರವಿಂದರ ಸಂದೇಶ ಕುರಿತು ಉಪನ್ಯಾಸ ನೀಡುವರು

★

ಗೃಹ ಭವನದ ಉದ್ಘಾಟನೆ

ಗೃಹ ಕಾರ್ಯ ಮಂತ್ರಿ ಶ್ರೀ ಎಂ. ವೈ. ಘೋರ್ಪಡೆಯವರು ಹೊಸಪೇಟೆಯ ಅನಂತ ಶಯನಗುಡಿ ಸೇವಾ ಸಹಕಾರಿ ಸಂಘದ ಗೃಹ ಭವನವನ್ನು ಉದ್ಘಾಟಿಸಿದರು

★ ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಶ್ರೀ ಡಿ. ಜವರೇಗೌಡರು ಈ ತಿಂಗಳ 6 ನೇ ತಾ॥ ನಿಂದ 19 ರ ವರೆಗೆ ರಣಾಂಗಣದಲ್ಲಿ ಇರುವುದರಿಂದ, ಅವರ ಕೆಲಸವನ್ನು ರಿಜಿಸ್ಟ್ರಾರ್ ಶ್ರೀ ಡಿ. ವಿ. ಶಿವಣ್ ನಿರ್ವಹಿಸುವರು

ಭರತನಾಟ್ಯ ಪ್ರದರ್ಶನ

ಭಾರತದ ಪ್ರಸಿದ್ಧ ನಟ ಜಮಬಾಲ ವೈದ್ಯ, ತನ್ನ ಪತಿ ಗೋಪಾಲ ಶರ್ಮನ್ ಅವರು ಬರೆದ ನಾಟಕ "ರಾವಣಾಯಣ" ವನ್ನಾಧರಿಸಿದ ಪ್ರದರ್ಶನವೊಂದನ್ನು ಮುಂದಿನ ಫೆಬ್ರವರಿಯಲ್ಲಿ ನ್ಯೂಯಾರ್ಕ್ ನಗರದಲ್ಲಿ ನೀಡಲಿದ್ದಾರೆ. ಲಂಡನ್ನಿನ ರಾಯಲ್ ಫೆಸ್ಟಿವಲ್ ಸಂಸ್ಥೆಯು ಸರ್ ಪೀಟರ್ ಡಾಬೆನಿಯವರು ರಾಮಾಯಣ ಕಥೆಯನ್ನು ನಾಟಕಕ್ಕೆ ಅಳವಡಿಸಿದ್ದಾರೆ.

●

ಯಾಗದ ಉದ್ಘಾಟನೆ

ವೇದ ಧರ್ಮ ರಕ್ಷಣಾ ಸಭೆಯವರು ವಿಶಾಖಪಟ್ಟಣದಲ್ಲಿ ವ್ಯವಸ್ಥೆ ಮಾಡಿರುವ 5 ನೆಯ ತಾಂಬಿನ ವರೆಗೆ ನಡೆಯುವ ಮಹಾರುದ್ರ ಯಾಗವನ್ನು ಕಾಮಕೋಟಿ ಪೀಠದ ಜಗದ್ಗುರು ಶ್ರೀ ಜಯೇಂದ್ರ ಸರಸ್ವತಿ ಸ್ವಾಮಿಗಳವರು ಉದ್ಘಾಟಿಸಿದರು.

ನಗರ ಸಭಾ ಚುನಾವಣೆ

ಬೆಂಗಳೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಮೋಟಗೊಂ ನಗರ ಸಭಾ ಚುನಾವಣೆ ಕೂಡಲೇ ನಡೆಯಬೇಕೆಂದು ಒತ್ತಾಯಿಸಿದ್ದಾರೆ.

●

ಮತದಾನ ವಯಸ್ಸು

ಹದಿನೆಂಟು ವರ್ಷಗಳ ವಯಸ್ಸಿನವರಿಗೆ ಮತದಾನ ಹಕ್ಕನ್ನು ಕೊಡಬೇಕೆಂದು ರಾಜ್ಯಸಭೆಯ ಉಪಾಧ್ಯಕ್ಷ ಶ್ರೀ ಎಂ. ಮುರಹರಿಯವರು ವಿಶಾಖಪಟ್ಟಣದಲ್ಲಿ ತಿಳಿಸಿದರು.

★

ಸೊಸೈಟಿಗಳ ಮೂರಾಟ ವಜಾ

ನವದೆಹಲಿ— ಬೀಹಾರು ಚಳುವಳಿಗೆ ಆರ್ಥಿಕ ನೆರವಾಗಿ ದೇಶದಲ್ಲಿ ಮೂರಲಾ ವಿವಿಧ ರೀತಿಯ ಹೆಸರಿನ ಸೊಸೈಟಿಗಳ ಮೂರಾಟವನ್ನು ರದ್ದು ಪಡಿಸಿರುವುದಾಗಿ ಶ್ರೀ ಜಗಜೀವನ್‌ರಾಮ್ ಪ್ರಕಟಿಸಿದರೆ

●

ಬೆಲೆ ಏರಿಕೆ

ಊಟಕಮಂಡ್– ನೀಲಗಿರಿಯಲ್ಲಿ ಗುಡಿ ಕೈಗಾರಿಕೆಗಾಗಿ ತಯಾರಾಗುತ್ತಿರುವ ಕರ್ಪೂರ ಕ್ಷೀಣ್ಣ ಬೊಂಬಾಯಿನಿಂದ ಕೇಳಿ ಪಡ್ಡಿ. ಕೆಲವು ತಿಂಗಳ ಹಿಂದೆ ಲೀಟರಿಗೆ ರೂ. 36 ಇದ್ದ ಅದರ ಬೆಲೆ ರೂ 15 ಕ್ಕೆ ಇಳಿದಿದೆ.

★

ಶುದ್ಧೀಕರಣ ಚಳವಳಿ

ಪೌರಸಭೆಯ ಕಮೀಷನರ್ ಶ್ರೀ ಸ್ವಾಮಿ ತಂತ್ರರಾವ್‌ರ ನೇತೃತ್ವದಲ್ಲಿ ಈ ತಿಂಗಳು 7 ನೇ ತಾ॥ ದೇವರಾಜ ಮೊಹಲ್ಲಾ ಶುದ್ಧೀಕರಣ ಕಾರ್ಯಕ್ರಮ ಇದೆ.

● ಮಾಸ್ಕೋ– ರಷ್ಯಾ ಇಂಡೋಲಜಿಸ್ಟರು ಭಾರತ ಸಾಹಿತ್ಯ ಬಗ್ಗೆ ಹಿಂದೀ ಸಾಹಿತ್ಯ ಬಗ್ಗೆ ಸಂಕ್ಷಿಪ್ತ ಸಂಶೋಧನೆ ನಡೆಸುತ್ತಿರುವರು

ಹೊಸ ರೀತಿಯ ಸ್ವಯಂಸೇವಕರ ಪಡೆ

ನವದೆಹರ– ತಮ್ಮ ಚಳವಳಿಗೆ ಮತ್ತು ಶಾಂತಿಯುವ ಪೂರ್ಣ ಕ್ರಾಂತಿಯ ದೀರ್ಘ ಕಾಲದ ಗುರಿಗೆ ವಿನಃ ಮತ್ಯಾತಕ್ಕೂ ನಿಷ್ಠೆ ಹೊಂದದ ಪಕ್ಷೇತರರಷ್ಟೆ ಬಿಹಾರಿನಲ್ಲಿಯ ವಿದ್ಯಾರ್ಥಿ ಮತ್ತು ಯುವಕರ ಸ್ವಯಂ ಸೇವಕರ ಪಡೆಯನ್ನು ಸ್ಥಾಪಿಸುವ ತಮ್ಮ ನಿರ್ಧಾರವನ್ನು ಶ್ರೀ ಜಯಪ್ರಕಾಶ ನಾರಾಯಣ ಪ್ರಕಟಿಸಿದರು

★

ಹುಲ್ಲೇ ಆಹಾರ

ಲಂಡನ್– ಆಹಾರ ಬೆಲೆ ಗಗನಕ್ಕೇರುತ್ತಿರುವುದರಿಂದ, 100 ಕೆಜಿ ತೂಕದ 54 ವರ್ಷದ ವಾಲ್ಟರ್ ಕಾರ್ನೀಲಿಯಸ್ ಕೇವಲ ಹುಲ್ಲನ್ನು ತಿಂದು ಜೀವಿಸಲು ನಿರ್ಧರಿಸಿರುವನು – ಪಿಟ್ಸ್‌ಬರ್ಗಿನ ಈತನು ಈಜುವ ತರಬೇತುಗಾರನಾಗಿದ್ದಾನೆ – ತಾನು ವಾರಕ್ಕೆ ಪಡೆಯುತ್ತಿರುವ ರೂ 432 ತನಗೆ ಸಾಲದೆನ್ನುತ್ತಿದ್ದಾನೆ – ತಿಂದ ಹುಲ್ಲು ಕೂಟ್ಟಿಗೆ ಹಸಿಯಾಗಿ ಸೇರಲು ಅದರ ಮೇಲೆ ಸ್ವಲ್ಪ ಹಾಲು ಕುಡಿಯುವನಂತೆ

★

ಸಿಧನ

ಪಾಟ್ನಾ— ಬಾಂಬು ಸ್ಫೋಟದಲ್ಲಿ ಗಾಯಗೊಂಡ ರೈಲ್ವೇ ಮಂತ್ರಿ ಶ್ರೀ ವಿಶ್ರಮು ಆಸ್ಪತ್ರೆಯಲ್ಲಿ ನಿಧನಗೊಂಡರು — ಈ ಸ್ಫೋಟ ಸಂಬಂಧದಲ್ಲಿ ಕೆಲವರು ದಸ್ತಗಿರಿ ಮಾಡಲ್ಪಟ್ಟರುವರು

★

ಸಂಸ್ಕೃತ ವ್ಯಾಕರಣ ಪ್ರಚಾರಕ್ಕೆ

ಚಿಕ್ಕಮಗಳೂರು— ಕಾಫೀಪ್ಲಾಂಟರ್ ಶ್ರೀ ಎಂ. ಎಲ್. ವೀರುವೇನಮೂರ್ತಿಯವರು ತಮ್ಮ ನೆನಪಿನಲ್ಲಿ ಶ್ರೀ ಶೃಂಗೇರಿ ಜಗದ್ಗುರುಗಳವರ ಪಾಡಪೂಜೆ ನೆರವೇರಿಸಿ ಅಲ್ಲಿ ನಡೆಯುತ್ತಿರುವ ಸಂಸ್ಕೃತ ಕಾಲೇಜು ಮೂಲಕ ಸಂಸ್ಕೃತ ವ್ಯಾಕರಣ ಪ್ರಚಾರಕ್ಕೆ ರೂ 60100 ಅರ್ಪಿಸಿದರು

(2)

ತೀವ್ರ ಆಹಾರಾಭಾವ

ನವದೆಹಲಿ— ಭಾರತ, ಬಂಗ್ಲಾದೇಶ ಮತ್ತು ಕೆಲವು ಪಶ್ಚಿಮ ಆಫ್ರಿಕಾ ದೇಶಗಳಲ್ಲಿ ತೀವ್ರ ಆಹಾರ ಅಭಾವವಿದೆ ಎಂದು ಆಹಾರ ವ್ಯವಸಾಯ ಸಂಸ್ಥೆಯ ವರದಿಯಾಗಿದೆ.

ವರದಕ್ಷಿಣೆ ವಿರುದ್ಧ ಚಳವಳಿ

ಬೆಂಗಳೂರು— ವರದಕ್ಷಿಣೆ ಇದ್ದರೆ ಮದುವೆ ಇಲ್ಲ ಎಂಬ ಚಳವಳಿಯನ್ನು ಇಲ್ಲಿ ಶಾ॥ 5 ರಂದು ಪ್ರಾರಂಭಿಸಲಾಗುವುದೆಂದು ಮಹಿಳಾ ರಾಷ್ಟ್ರೀಯವಿದ್ಯಾಲಯದ ಪ್ರಿನ್ಸಿಪಾಲರಾದ ಮಿಸ್ ಸಿ. ಎಸ್. ಹುಂಗಳರವರು ಪತ್ರಿಕೆಯವರಿಗೆ ತಿಳಿಸಿದರು.

ಅಂತರಜಲಾಂತರಗಾಮಿಗಳ ಡಿಕ್ಕಿ

ವಾಷಿಂಗ್ಟನ್— ಉತ್ತರ ಸಮುದ್ರದಲ್ಲಿ ಅಣುಶಕ್ತಿ ಕ್ಷಿಪಣಿಗಳು ತುಂಬಿದ್ದ ಒಂದು ಅಮೇರಿಕಾ ಜಲಾಂತರ್ಗಾಮಿಗೂ ಒಂದು ರಷ್ಯಾ ಜಲಾಂತರ್ಗಾಮಿಗೂ ಡಿಕ್ಕಿ ಹೊಡೆತವಾಯಿತು – ಕ್ಯಾಪ್ಟನ್ನುಗಳು ಯಾವ ಘರ್ಷಣೆಗೂ ಅವಕಾಶ ಕೊಡದೆ ತಮ್ಮತಮ್ಮ ಮಾರ್ಗ ಹಿಡಿದು ಹೊರಟುಹೋದರು.

ವಚನಾಮೃತ

ಹಸಿದು ಬಂದ ಗಂಡನಿಗೆ ಉಣಲಿಕ್ಕತಿ
ಬಡವಾದನೆಂದು ಮರುಗುವ ಸತಿಯು ಸ್ನೇಹದಂತೆ
ಬಂದುದನರಿಯಳು, ಇದ್ದುದು ಸವಿಯಳು
ದುಃಖವಿಲ್ಲದ ಅಕ್ಕೆ ಹಗರಣಿಗನ ತೆರನಂತೆ
ಕೂಡಲ ಸಂಗಮದೇವಾ. — ಬಸವಣ್ಣನವರು

ವುಡ್‌ಲಾಂಡ್ 3 1 75 ರಿಂದ

ಅಮೋಘ 4 ನೇ ವಾರ

ಚಿಟ್ಟಿಕ್ಕಾರಿ

ಅಪೂರ್ವ ಈಸ್ಟ್‌ಮನ್ ಕಲರ್ ಮಲಯಾಳಂ ಕಲಾಕೃತಿ

ಪಾತ್ರ — ಲಕ್ಷ್ಮೀ ನೋಹನ್ ದಿನ ೫ ಪ್ರದರ್ಶನಗಳು

ಅಪೇರಾ 3 1 75 ರಿಂದ

ಅಬ್ಬು - ತಂಗ್ಲ

ಮುತ್ತುರಾಮನ್ ಜಯಲಲಿತ

ಅಭಿನಯಿಸಿರುವ

ಅಮೋಘ ತಮಿಳು ಚಿತ್ರ

ದಿನ ೫ ಪ್ರದರ್ಶನಗಳು

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Help The Gorakshana

— Humanitarian Propoganda Monthly....

Protect the Cow

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore